**ಸಿಸಿ ನಂಬರಃ 2440/2024**

**ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 20-08-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**(ಸಾಕ್ಷಿಯ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲಾಗಿರುತ್ತದೆ)**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಜಿ.ಎನ್. ವಕೀಲರಿಂದ,**

ನಾನು ಮೆಕ್ಯಾನಿಕ್ ಕೆಲಸ ಮಾಡುತ್ತೇನೆ. ನನಗೆ ಸ್ವಂತ ಅಂಗಡಿ ಭಟ್ಕಳದಲ್ಲಿ ಇರುತ್ತದೆ. ಆರೋಪಿ ನನಗೆ 20 ವರ್ಷಗಳಿಂದ ಪರಿಚಿತರಿರುತ್ತಾರೆ. ಆರೋಪಿಗೆ ಹೂವಿನ ಅಂಗಡಿ ಇತ್ತು. ಈಗ ಆಕೆ ಮನೆಯಲ್ಲಿ ಕ್ಯಾಟರಿಂಗ್ ಕೆಲಸ ಮಾಡುತ್ತಾರೆ. ನಾನು ಆರೋಪಿಗೆ ಹಣ ನೀಡುವ 2-3 ತಿಂಗಳ ಮೊದಲು ನನ್ನ ಬಳಿ ಆರೋಪಿ ಹಣ ಕೇಳಿರುತ್ತಾರೆ. ಆ ರೀತಿ ನನ್ನ ಮನೆಗೆ ಬಂದು ಹಣ ಕೇಳಿರುತ್ತಾರೆ. ನನ್ನ ಮನೆ ಭಟ್ಕಳದ ಮಾರುತಿ ನಗರದಲ್ಲಿ ಇರುತ್ತದೆ. ಆರೋಪಿ ತನ್ನ ಗಂಡನ ವ್ಯವಹಾರಕ್ಕಾಗಿ ನನ್ನ ಬಳಿ ಹಣ ಕೇಳಿರುತ್ತಾರೆ. ಆರೋಪಿಯ ಗಂಡ ಕ್ಯಾಟರಿಂಗ್ ವ್ಯವಹಾರ ಮಾಡುತ್ತಾರೆ. ಆರೋಪಿ ಒಬ್ಬಳೇ ನನ್ನ ಮನೆಗೆ ಬಂದು ಹಣ ಕೇಳಿರುತ್ತಾರೆ.

2. ದಿನಾಂಕಃ 25-05-2023 ರಂದು ಆರೋಪಿಗೆ ಹಣ ನೀಡಿರುತ್ತೇನೆ. ಆರೋಪಿ ಚೆಕ್ ನ್ನು ಹಣ ಪಡೆದ ದಿನದಂದು ನೀಡಿರುವುದಿಲ್ಲ. ಆರೋಪಿ ಹಣ ಪಡೆದ 6 ತಿಂಗಳ ನಂತರ ಹಣ ವಾಪಸ್ಸು ಮಾಡುತ್ತೇನೆ ಎಂದು ಹೇಳಿರುತ್ತಾರೆ. ಆರೋಪಿ 6 ತಿಂಗಳ ನಂತರವೂ ಸಹ ಹಣ ವಾಪಸ್ಸು ನೀಡಿರುವುದಿಲ್ಲ. ಆರೋಪಿಗೆ ನಗದು ರೂಪದಲ್ಲಿ ಹಣ ನೀಡಿರುತ್ತೇನೆ. ಆರೋಪಿಗೆ ನೀಡಿದ ಹಣ ನನ್ನ ಉಳಿತಾಯದ ಹಣ ಆಗಿತ್ತು. ನಾನು ಹೇಳುವಂತೆ ಆರೋಪಿಗೆ ಹಣ ನೀಡಿದ ಬಗ್ಗೆ ಯಾವುದೇ ಕರಾರು ಮಾಡಿಕೊಂಡಿರುವುದಿಲ್ಲ.

3. ನನ್ನ ಪತ್ನಿಯ ಹೆಸರು ಕಾವ್ಯ. ಹಣಕಾಸಿನ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಯು ನನ್ನ ಪತ್ನಿಯ ವಿರುದ್ಧ ಭಟ್ಕಳ ನಗರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ, ಹೌದು ನಾನು ನೋಟೀಸು ಕಳುಹಿಸಿದ ನಂತರ ದೂರು ದಾಖಲಿಸಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**